ಪಿ.ಡಬ್ಲ್ಯು 2

(ದಿನಾಂಕ 15-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದಿ ಸಂಸ್ಥೆಯ ಕಿರಿಯ ಸಹಾಯಕರಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ಫ್ರಾ.ಸಾ. 1 ರವರು ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ. 2 ರಿಂದ 13 ಎಂದು ಗುರುತಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಫಿರ್ಯಾದಿ ಸಂಸ್ಥೆಯವರು ಪ್ರಕರಣವನ್ನು ನಡೆಸಲು ನೀಡಿರುವ ಅಧಿಕಾರ ಪತ್ರದ ಧೃಡೀಕೃತ ಪ್ರತಿಯನ್ನು ನಿಪಿ 14 ಎಂದು ಗುರುತಿಸಲಾಯಿತು.

ಆರೋಪಿಯು ನೀಡಿರುವ ಚೆಕ್‌ನ್ನು ನಿ.ಪಿ.2 ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.3 ಎಂದು, ದಿನಾಂಕ 05-11-2022 ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.4 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ನಿ.ಪಿ.5 ಎಂದು, ಆರೋಪಿಗೆ ನೀಡಿದ ನೋಟಿಸ್ ಸ್ವೀಕರಿಸಲು ನಿರಾಕರಿಸಿ ಹಿಂದಿರುಗಿದ್ದು, ಸದರಿ ಅಂಚೆ ಲಕೋಟೆಯನ್ನು ನಿ.ಪಿ. 6 ಎಂದು, ಸಾಲದ ಅರ್ಜಿಯ ದೃಢೀಕೃತ ಪ್ರತಿಯನ್ನು ನಿ.ಪಿ. 7 ಎಂದು, ಡಿಮಾಂಡ ಫ್ರಾಮಿಸರಿ ನೋಟನ ದೃಢೀಕೃತ ಪ್ರತಿಯನ್ನು ನಿ.ಪಿ. 8, ಮುದ್ದತ ವಚನ ಪತ್ರದ ದೃಢೀಕೃತ ಪ್ರತಿಯನ್ನು ನಿ.ಪಿ. 9 ಎಂದು, ಸಾಲದ ಕರಾರಿನ ದೃಢೀಕೃತ ಪ್ರತಿಯನ್ನು ನಿ.ಪಿ. 10 ಎಂದು, ಅಡಮಾನು ಕರಾರಿನ ದೃಢೀಕೃತ ಪ್ರತಿಯನ್ನು ನಿ.ಪಿ. 11 ಎಂದು, ಸಾಲದ ಖಾತೆಯ ಉತಾರನ್ನು ನಿ.ಪಿ. 12 ಎಂದು, ಫಿರ್ಯಾದನ್ನು ನಿ.ಪಿ.13 ಎಂದು ಈಗಾಗಲೇ ನಿಶಾನೆಯನ್ನಾಗಿ ಗುರುತಿಸಲಾಗಿದ್ದು, ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ನಿ.ಪಿ. 2 ನ್ನು ತೋರಿಸಲಾಗಿ ಅದರಲ್ಲಿರುವ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 2(ಎ) ಎಂದು, ನಿ.ಪಿ. 6 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ನೊಟೀಸಿನ ಮೂಲ ಪ್ರತಿಯನ್ನು ಕಚೇರಿ ಪ್ರತಿಯೊಂದಿಗೆ ತಾಳೆ ಮಾಡಲಾಗಿ ಹೊಂದಾಣಿಕೆ ಕಂಡು ಬಂದ ಮೇರೆಗೆ ನೊಟೀಸಿನ ಮೂಲ ಪ್ರತಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಫಿರ್ಯಾದಿಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಜೆ. ಎಂ. ಎಫ್. ಸಿ. ಕುಮಟಾ